■ ವಿಶಾಖ ಎನ್.



# ಸಂಖ್ಯಾ ಉಬ್ಬರದಲ್ಲೂ ಅದೇ ಹಳೆಯ ತೆವಳಿಕೆ

ಕ್ಯಾಲೆಂಡರ್ ಪುಟಗಳು ಮಗಚುತ್ತಾ ಬಂದಂತೆ ಸಿನಿಮಾ ಸಂಖ್ಯಾ ಸಮೃದ್ಧಿಯೂ ಹಿಗ್ಗುತ್ತಾ ಹೋಗುವುದು ಕನ್ನಡ ಸಿನಿಮಾಗೆ ಹೊಸತೇನೂ ಅಲ್ಲ. ಈ ವರ್ಷ ಆಗಸ್ಟ್ ಹೊತ್ತಿಗೇ ಅಧಿಕೃತವಾಗಿ 175ಕ್ಕೂ ಹೆಚ್ಚು ಕನ್ನಡ ಚಿತ್ರಗಳು ತೆರೆಕಂಡವು. ಆದರೆ, ಅವುಗಳಲ್ಲಿ ಮೊದಲಿಗೆ ಸದ್ದು ಮಾಡಿದ್ದು 'ಸು ಫ್ರಂ ಸೋ'. ಬೆಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಮಂಗಳೂರಿನಲ್ಲಿ ಪ್ರೀಮಿಯರ್ ಶೋಗಳನ್ನು ಆಯೋಜಿಸುವ ಆಲೋಚನೆಯನ್ನು ನಿರ್ಮಾಪಕ ಹಾಗೂ ನಟ ರಾಜ್ ಬಿ. ಶೆಟ್ಟಿ ತೇಲಿಬಿಟ್ಟರು. ಆ ಪ್ರೀಮಿಯಂ ಶೋಗಳನ್ನು ಹಣ ಕೊಟ್ಟು ಜನರೇ ಬಂದು ನೋಡುವ ರೀತಿ ಆಯೋಜಿಸಿದ್ದು ಫಲ ನೀಡಿತು. ಸಿನಿಮಾ ನೋಡಿ ಜನರ ಬಾಯಿಂದ ಬಾಯಿಗೆ ಅದರ ಗುಣಾವಗುಣಗಳು ಹರಿದಾಡಿತು.

ನಿರ್ದೇಶಕ ಜೆ.ಪಿ. ತುಮ್ಮಿನಾಡ್ ಅವರಿಗೂ ಈ ಯೋಚನೆ ಹಿಡಿಸಿತು. ಕಡಿಮೆ ಬಜೆಟ್‌ನಲ್ಲಿ ತಯಾರಿಸಲಾಗಿದ್ದ ಸಿನಿಮಾ ನೂರು ಕೋಟಿ ಕ್ಲಬ್ ದಾಟಿತು. ಜುಲೈ ತಿಂಗಳಲ್ಲಿ ಈ ಚಿತ್ರ ತೆರೆಕಾಣುವವರೆಗೆ ಸಂಖ್ಯಾ ಉಬ್ಬರ ಹೊರತುಪಡಿಸಿ ಕನ್ನಡ ಚಿತ್ರರಂಗಕ್ಕೆ ಆಶಾದಾಯಕವಾದ ಸಂಗತಿಗಳೇ ಸಿಕ್ಕಿರಲಿಲ್ಲ. ಆ ಬರವನ್ನು 'ಸು ಫ್ರಂ ಸೋ' ನೀಗಿತು. ಮಂಗಳೂರು ಪರಿಸರವನ್ನು ಗಟ್ಟಿಯಾದ ಪಾತ್ರವಾಗಿಸಿ, ಕಚಗುಳಿ ಇಡುವ ಸನ್ನಿವೇಶಗಳನ್ನು ಹೆಚ್ಚು ಮಾಡಿ, ಸಾಂದರ್ಭಿಕ ಚೇಷ್ಟೆಗಳನ್ನೂ ಬೆಸೆದು ಮಾಡಿದ ಆ ಚಿತ್ರದಲ್ಲಿ ಹೆಣ್ಣಿನ ಮೇಲೆ ನಡೆಯುವ ಶೋಷಣೆಯ ಗಂಭೀರ ವಸ್ತುವೊಂದು ಇದೆ. ವ್ಯಂಗ್ಯ ಎಂದರೆ, ಅದು ನಕ್ಕು ನಕ್ಕು ಹೊಟ್ಟೆ ಹುಣ್ಣಾಗುವಂತೆ ಮಾಡುವ ಸಿನಿಮಾ ಎಂದೇ ತಪ್ಪಾಗಿ ಪ್ರಚಾರ ಪಡೆದುಕೊಂಡುಬಿಟ್ಟಿತು. ಪ್ರಚಾರ ತಪ್ಪೋ ಸರಿಯೋ, ಸಿನಿಮಾ ದೊಡ್ಡ ಹಿಟ್ ಆಯಿತೆನ್ನುವುದೇ ಸತ್ಯ.

ವರ್ಷ ಮುಗಿಯುತ್ತಾ ಬಂದಾಗ ಅಕ್ಟೋಬರ್ ನಲ್ಲಿ 'ಕಾಂತಾರ ಚಾಪ್ಟರ್ 1' ಚಿತ್ರವು ಕನ್ನಡ ಚಿತ್ರೋದ್ಯಮದ ಪಾಲಿಗೆ ಮಹಾ ಚೇತರಿಕೆಯಾಗಿ ಪರಿಣಮಿಸಿತು. 'ಕಾಂತಾರ' ಸಿನಿಮಾ ತೆರೆಕಂಡು ವರ್ಷಗಳು ಉರುಳಿದ ನಂತರವೂ ಅದರ ಬೀಸು ಕಡಿಮೆಯಾಗಿಲ್ಲ ಎನ್ನುವುದನ್ನು ಚಿತ್ರದ ಭರ್ಜರಿ ಯಶಸ್ಸು ಸಾಬೀತುಪಡಿಸಿತು.



125 ಕೋಟಿ ರೂಪಾಯಿಗೂ ಹೆಚ್ಚು ಬಜೆಟ್‌ನಲ್ಲಿ ತಯಾರಾದ ಸಿನಿಮಾ, ಎಂಟುನೂರು ಕೋಟಿ ರೂಪಾಯಿಗೂ ಹೆಚ್ಚು ಗಳಿಕೆ ಮಾಡಿದ್ದು ದೇಶದ ಚಿತ್ರಪಟಗಳ ನಕಾಶೆಯಲ್ಲಿ ಕರ್ನಾಟಕಕ್ಕೆ ಒಳ್ಳೆಯ ಸ್ಥಾನಮಾನ ಪ್ರಾಪ್ತಿಯಾಗುವಂತೆ ಮಾಡಿತು. ಈ ಚಿತ್ರವು ಸಹಜವಾಗಿಯೇ ರಿಷಭ್ ಶೆಟ್ಟಿ ಅವರನ್ನು ನಟ– ನಿರ್ದೇಶಕನಾಗಿ ಗಟ್ಟಿಗೊಳಿಸಿತು. ಅದಕ್ಕೂ ಮಿಗಿಲಾಗಿ ನಟಿ ರುಕ್ಮಿಣಿ ವಸಂತ ಅವರಿಗೆ ಇರುವ ಅಭಿಮಾನಿ ಬಳಗವನ್ನು ವಿಸ್ತರಿಸಿತು. ದೇಶದ ಹಲವು ಭಾಷೆಗಳ ಸಿನಿಮಾಗಳಲ್ಲಿ ಅದಾಗಲೇ ಛಾಪು ಮೂಡಿಸಿದ್ದ ಗುಲ್ಶನ್ ದೇವಯ್ಯ ಅವರಿಗೂ ಕನ್ನಡದ ಈ ಸಿನಿಮಾ ವರ್ಚಸ್ಸನ್ನು ಕೊಟ್ಟಿತು. 'ಸು ಫ್ರಂ ಸೋ' ಯಶಸ್ಸಿನ ಅಲೆ ಏಳುವ ಒಂದು ತಿಂಗಳ ಮೊದಲು ತೆರೆಕಂಡಿದ್ದ ವಿನೋದ್ ಪ್ರಭಾಕರ್ ಅಭಿನಯದ 'ಮಾದೇವ' ಸಿನಿಮಾ ಅಪರೂಪದ ವಸ್ತುವನ್ನು ಒಳಗೊಂಡಿತ್ತು. ನವೀನ್ ರೆಡ್ಡಿ ಬಿ. ನಿರ್ದೇಶನದ ಈ ಚಿತ್ರದಲ್ಲಿ ಗಲ್ಲಿಗೆ ಏರಿಸುವ ಕೆಲಸ ಮಾಡುವ ಪಾತ್ರಧಾರಿಯಾಗಿ ವಿನೋದ್ ಅಭಿನಯವು ಜನಮೆಚ್ಚುಗೆಗೆ ಪಾತ್ರವಾಯಿತು. ಗಾಲಿ ಜನಾರ್ದನ ರೆಡ್ಡಿ ಪುತ್ರ ಕಿರೀಟಿ ರೆಡ್ಡಿ ಅಭಿನಯಿಸಿದ್ದ 'ಜೂನಿಯರ್' ಸಿನಿಮಾ ಸಾಹಸ ಹಾಗೂ ನೃತ್ಯ ಲಾಲಿತ್ಯದಿಂದ ಒಂದಿಷ್ಟು ರಂಜಿಸಿತು. ರೋಹಿತ್ ಪದಕಿ ನಿರ್ದೇಶಿಸಿದ 'ಎಕ್ಕ' ಚಿತ್ರವು ಚರಣರಾಜ್ ಸ್ವರ ಸಂಯೋಜನೆಯ ಹಾಡುಗಳಿಂದ ಉತ್ತಮ ಆರಂಭವನ್ನೇನೋ ಪಡೆಯಿತು. ಆದರೆ ನಿರೀಕ್ಷಿತ ಯಶಸ್ಸು ಪಡೆಯಲು ಆಗಲಿಲ್ಲ. ರಾಜ್ ಕುಮಾರ್ ಕುಟುಂಬದ ಕುಡಿ ಯುವ ರಾಜ್ ಕುಮಾರ್ ನಟರಾಗಿ ಇನ್ನೂ ಒಂದು ಹಂತ ಮೇಲೇರಲು ಈ ಸಿನಿಮಾ ಚಿಮ್ಮುಹಲಗೆಯಾಯಿತು.

ತರುಣ್ ಸ್ಟುಡಿಯೋಸ್ ನಿರ್ಮಾಣದ 'ಭೂ ಮಂತರ್' ನಟ ಶರಣ್ ಅಭಿನಯದ ಕಾರಣಕ್ಕೆ ಕುತೂಹಲ ಮೂಡಿಸಿತ್ತು. ಆದರೆ ಅದಕ್ಕಿಂತ ಹೆಚ್ಚಾಗಿ ಇದೇ ಸಂಸ್ಥೆ ನಿರ್ಮಿಸಿದ 'ಏಳು ಮಳೆ' ಸಿನಿಮಾ ಜನಮೆಚ್ಚುಗೆಗೆ ಪಾತ್ರವಾಯಿತು. ಮದುವೆ ಮನೆಯಿಂದ ಓಡಿಹೋಗುವ ಹುಡುಗಿಯ ಸುತ್ತ ಅರಣ್ಯಕ್ಕೆ ಸಂಬಂಧಿಸಿದ ಘಟನಾವಳಿಗಳನ್ನು ಬೆಸೆದು ಹೆಣೆದ ಈ ಚಿತ್ರಕ್ಕೆ ಥ್ರಿಲ್ಲರ್‌ನ ಅಂಶಗಳನ್ನು ನಿರ್ದೇಶಕ ಪುನೀತ್ ರಂಗಸ್ವಾಮಿ ಅಳವಡಿಸಿದ್ದರು. ನಟ ರಾಣಾ ಬಗ್ಗೆ ಭರವಸೆಯನ್ನು ಈ ಚಿತ್ರ ಹುಟ್ಟಿಸಿತು.

ವರ್ಷ ಮುಗಿಯುತ್ತಾ ಬಂದಾಗ ಭರವಸೆ ಮೂಡಿಸಿದ ಚಿತ್ರಗಳಲ್ಲಿ ಶಶಾಂಕ್ ನಿರ್ದೇಶನದ 'ಬ್ರ್ಯಾಟ್' ಮುಖ್ಯವಾದುದು. ಡಾರ್ಲಿಂಗ್ ಕೃಷ್ಣ ನಟನಾಗಿ ಭಿನ್ನ ಪರಿಧಿ ಪ್ರವೇಶಿಸಿದ ಸಿನಿಮಾ ಇದು. ಹಣದ ಹಿಂದೆ ಓಡುವ ಯುವ ಮನಸ್ಸುಗಳ ಸುತ್ತ ಹೆಣೆದ ಬಿಗಿಯಾದ ಚಿತ್ರಕಥೆಯ ಸಶಕ್ತ ಥ್ರಿಲ್ಲರ್ ಆಗಿ ನೆನಪಿನಲ್ಲಿ ಉಳಿಯಿತು. ಜೈಲಿನಲ್ಲಿ ಇರುವ ದರ್ಶನ್ ಅಭಿನಯದ 'ಡೆವಿಲ್' ದ್ವಿಪಾತ್ರದ ಕಾರಣಕ್ಕೆ ಸಹಜ ಅಭಿಮಾನಿಗಳನ್ನು ಆಕರ್ಷಿಸಿತು. ಸುದೀಪ್ ನಟನೆಯ 'ಮಾರ್ಕ್' ಹಾಗೂ ಶಿವರಾಜ್ ಕುಮಾರ್, ಉಪೇಂದ್ರ, ರಾಜ್ ಶೆಟ್ಟಿ ಭಿನ್ನ ಕಾಂಬಿನೇಷನ್‌ನ '45' ವರ್ಷದ ಮುಕ್ತಾಯವನ್ನು ಅರ್ಥಪೂರ್ಣ ಆಗಿಸಲಿವೆ.

ಬಹುಭಾಷಾ ತಾರೆ ಬಿ. ಸರೋಜಾದೇವಿ, ಸರಿಗಮ ವಿಜಿ, ಯಶವಂತ ಸರದೇಶಪಾಂಡೆ, ರಾಜು ತಾಳಿಕೋಟೆ, ಬ್ಯಾಂಕ್ ಜನಾರ್ದನ್, ದಿನೇಶ್ ಮಂಗಳೂರು, ಹರೀಶ್ ರೈ ಹಾಗೂ ಅನುಭವಿ ನಟ ಉಮೇಶ್ ಸೇರಿದಂತೆ ಕೆಲವು ಗಣ್ಯರು ಅಗಲಿದ ವರ್ಷವೂ ಇದಾಗಿದೆ. ಕ್ಯಾಲೆಂಡರ್‌ನ ಕೊನೆಯ ತಿಂಗಳ ಪುಟ ಹರಿಯಲು ಎರಡು ವಾರಕ್ಕೆ ಮೊದಲು 225 ಕನ್ನಡ ಸಿನಿಮಾಗಳು ತೆರೆಕಂಡವು. ಆದರೆ, ಗೆಲುವಿನ ನಗು ಕಂಡದ್ದು ಬೆರಳೆಣಿಕೆಯಷ್ಟು ಮಾತ್ರ. ■